

بسم اللهِ الرّحمٰن الرّحيم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **17–09–2021** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ.

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ - بِسْمِ اللهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعَالَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّالِّيْنَ.

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರ ಕಾಲದ ಘಟನೆಗಳ ಪ್ರಸ್ತಾಪ ನಡೆಯುತ್ತಿತ್ತು. ಇಂದು ಯರ್‌ಮೂಕ್ ಯುದ್ಧದ ಕುರಿತು ಸ್ವಲ್ಪ ಹೇಳುತ್ತೇನೆ. ಯರ್‌ಮೂಕ್ ಯುದ್ಧವು ಹಿಜರಿ 15ರಲ್ಲಿ ನಡೆದಿತ್ತು ಎಂದೂ ಇನ್ನು ಕೆಲವರ ಪ್ರಕಾರ ಇದು ಹಿಜರಿ 13ರಲ್ಲಿ ಡಮಸ್ಕಸ್ ಮೇಲಿನ ವಿಜಯಕ್ಕೆ ಮುಂಚೆ ನಡೆದಿತ್ತು ಎಂದೂ ವರದಿಯಾಗಿದೆ. ಒಂದು ವರದಿಯ ಪ್ರಕಾರ ಹಝ್ರತ್ ಉಮರ್‌ರಿಗೆ ಮೊತ್ತಮೊದಲು ಯರ್ಮೂಕ್ ಯುದ್ಧದ ವಿಜಯದ ಕುರಿತು ಸುವಾರ್ತೆ ಲಭಿಸಿತ್ತು. ಅದು ಹಝ್ರತ್ ಅಬೂಬಕರ್(ರ)ರ ನಿಧನದ ಇಪ್ಪತ್ತು ದಿನಗಳ ನಂತರವಾಗಿತ್ತು. ಆದರೆ ಕೆಲವರ ಪ್ರಕಾರ ಡಮಸ್ಕಸ್ ಮೇಲಿನ ವಿಜಯದ ಸುವಾರ್ತೆ ಮೊದಲು ಲಭಿಸಿತ್ತು. ಇದೇ ಹೆಚ್ಚು ಸರಿಯೆಂದು ಸಾಕ್ಷ್ಯಾಧಾರಗಳಿಂದ ತಿಳಿದುಬರುತ್ತದೆ. ರೋಮನ್ನರು ಪರಾಜಯಗೊಂಡು ಡಮಸ್ಕಸ್ ಮತ್ತು ಹಮಸ್‌ನಿಂದ ಹೊರಟು ಅಂತಾಕಿಯಗೆ ತಲುಪಿದರು. ಅಲ್ಲಿ ಹಿರ್ಖಲ್ ತನ್ನ ಚಾಣಾಕ್ಷ ಮತ್ತು ಗೌರವಾನ್ವಿತ ದರ್ಬಾರಿಗಳೊಡನೆ ಹೀಗೆ ಕೇಳಿದರು: ಸಾಧನಸಾಮಗ್ರಿಗಳಲ್ಲಿ ಮತ್ತು ಯುದ್ಧ ಶಕ್ತಿಯಲ್ಲಿ ಅರೇಬಿಯರು ನಿಮಗಿಂತ ಕಡಿಮೆಯಿದ್ದೂ ಅವರು ನಿಮ್ಮ ಮೇಲೆ ಹೇಗೆ ವಿಜಯ ಸಾಧಿಸುತ್ತಿದ್ದಾರೆ? ಆಗ ಎಲ್ಲ ಸಲಹೆಗಾರರು ನಾಚಿಕೆಯಿಂದ ತಲೆ ತಗ್ಗಿಸಿದರು. ಆದರೆ ಒಬ್ಬ ಅನುಭವಿ ವೃದ್ಧ ವ್ಯಕ್ತಿ ಹೀಗೆ ಹೇಳಿದರು: ಅರೇಬಿಯರು ಸ್ವಭಾವಗುಣಗಳಲ್ಲಿ ನಮಗಿಂತ ಉತ್ತಮರಾಗಿರುವರು. ಅವರು ರಾತ್ರಿ ಸಮಯದಲ್ಲಿ ಆರಾಧನೆ ಮಾಡುತ್ತಾರೆ ಮತ್ತು ಹಗಲು ಉಪವಾಸವಿರಿಸುತ್ತಾರೆ. ಅವರು ಯಾರ ಮೇಲೂ ದೌರ್ಜನ್ಯ ಮಾಡುವುದಿಲ್ಲ. ಪರಸ್ಪರ ಎಲ್ಲರೊಂದಿಗೂ ಸಮಾನವಾಗಿ ವರ್ತಿಸುತ್ತಾರೆ. ಆದರೆ ನಾವಾದರೋ, ಮದ್ಯಪಾನ ಮಾಡುತ್ತೇವೆ, ಕೆಟ್ಟ ಕೃತ್ಯಗಳನ್ನು ಮಾಡುತ್ತೇವೆ, ಪ್ರತಿಜ್ಞೆಗಳನ್ನು ಪಾಲಿಸುವುದಿಲ್ಲ, ಇತರರ ಮೇಲೆ ದೌರ್ಜನ್ಯ ಮಾಡುತ್ತೇವೆ. ಆದ್ದರಿಂದ ಅವರ ಕೆಲಸಗಳಲ್ಲಿ ಆವೇಶ ಮತ್ತು ಸ್ಥಿರಚಿತ್ತತೆ ಇರುತ್ತದೆ. ಆದರೆ ನಮ್ಮ ಕೆಲಸದಲ್ಲಿ ಧೈರ್ಯ ಮತ್ತು ಸ್ಥೈರ್ಯವಿರುವುದಿಲ್ಲ.

ರೋಮಿನ ಅರಸನು ಸಿರಿಯದಿಂದ ನಿರ್ಗಮಿಸಲು ನಿರ್ಧರಿಸಿದ್ದನು. ಆದರೆ ಗುಂಪು ಗುಂಪಾಗಿ ಕ್ರೈಸ್ತರು ವಿನಂತಿ ಮಾಡುತ್ತಾ ಅವನ ಬಳಿಗೆ ಬರುತ್ತಿದ್ದರು. ರೋಮ್ ಚಕ್ರವರ್ತಿಗೆ ಇದು ಅಭಿಮಾನದ ಪ್ರಶ್ನೆಯಾಗಿತ್ತು. ತನ್ನ ಅರಸತನದ ಎಲ್ಲ ಶಕ್ತಿಯನ್ನು ಅರೇಬಿಯರ ವಿರುದ್ಧ ಚಲಾಯಿಸಿದನು. ಇಸ್ತಂಬೂಲ್, ಅರ್ಮೇನಿಯ ದ್ವೀಪ ಹೀಗೆ ಎಲ್ಲ ಸ್ಥಳಗಳಿಂದ ಸೈನಿಕರು ಅಂತಾಕಿಯಗೆ ಧಾವಿಸಿದರು. ಈ ತಯಾರಿಯ ಸುದ್ದಿ ಹಝ್ರತ್ ಅಬೂಉಬೈದರಿಗೆ ಲಭಿಸಿದಾಗ ಅವರೊಂದು ಪ್ರಭಾವಶಾಲಿ ಭಾಷಣ ಮಾಡಿದರು ಮತ್ತು ಜನರೊಡನೆ ಸಲಹೆ ಕೇಳಿದರು. ಆಗ ಯಝೀದ್ ಬಿನ್ ಅಬೂಸುಫ್‌ಯಾನ್ ಹೀಗೆ ಸಲಹೆ ನೀಡಿದರು: ಮಹಿಳೆಯರನ್ನು ಮತ್ತು ಮಕ್ಕಳನ್ನು ಪಟ್ಟಣದಲ್ಲೇ ಬಿಟ್ಟು ನಾವು ಪಟ್ಟಣದ ಹೊರಗೆ ಸೈನ್ಯದೊಂದಿಗೆ ಪಂಕ್ತಿಬದ್ಧರಾಗಿ ನಿಲ್ಲಬೇಕು. ಆಗ ಶರಹ್‌ಬೀಲ್ ಬಿನ್ ಹಸನ ಹೇಳಿದರು: ಪಟ್ಟಣ ನಿವಾಸಿಗಳೆಲ್ಲರೂ ಕ್ರೈಸ್ತರಾಗಿದ್ದಾರೆ. ಅವರು ಪಟ್ಟಣದ ಒಳಗಿನಿಂದಲೇ ದಂಗೆ ಏಳುವ ಸಾಧ್ಯತೆಯಿದೆ. ಆಗ ಹಝ್ರತ್ ಅಬೂಉಬೈದ(ರ) ಹೇಳಿದರು: ನಾವು ಕ್ರೈಸ್ತರನ್ನು ಪಟ್ಟಣದಿಂದ ಹೊರಗೆ ಹಾಕುವ. ಅದಕ್ಕೆ ಉತ್ತರವಾಗಿ ಶರಹ್‌ಬೀಲ್ ಹೇಳಿದರು: ಹಾಗೆ ಮಾಡುವುದಾದರೆ, ಅದು ನಾವು ಅವರಿಗೆ ಕೊಟ್ಟ ಮಾತಿನ ಉಲ್ಲಂಘನೆಯಾಗುವುದು. ತಕ್ಷಣವೇ ಹಝ್ರತ್ ಅಬೂಉಬೈದ(ರ)ರಿಗೆ ತನ್ನ ತಪ್ಪಿನ ಅರಿವಾಯಿತು. ಕೊನೆಗೆ ಡಮಸ್ಕಸಿಗೆ ರವಾನೆಯಾಗಲು ತೀರ್ಮಾನಿಸಲಾಯಿತು. ಅಲ್ಲಿ ಖಾಲಿದ್ ಸಹ ಇದ್ದಾರೆ. ಅರೇಬಿಯದ ಗಡಿಪ್ರದೇಶವೂ ಸಮೀಪದಲ್ಲೇ ಇದೆ. ಅನಂತರ ಪಟ್ಟಣ ನಿವಾಸಿಗಳ ಸುರಕ್ಷೆಗಾಗಿ ಅವರಿಂದ ವಸೂಲು ಮಾಡಲಾದ ಅನೇಕ ಲಕ್ಷದಷ್ಟು ಜಿಝ್ಯಿಯ, ಎಂದರೆ ತೆರಿಗೆ ಹಣವನ್ನು ಅವರಿಗೆ ಮರಳಿ ಕೊಡಲಾಯಿತು. ಇದರಿಂದ ಕ್ರೈಸ್ತರು ಮತ್ತು ಯಹೂದಿಯರು ಬಹಳ ಪ್ರಭಾವಿತರಾದರು. ಅಬೂಉಬೈದ(ರ) ಹೀಗೆ ವರ್ತಿಸಿದ್ದು ಹಮಸಿನ ಜನರೊಂದಿಗೆ ಮಾತ್ರವಲ್ಲ. ಬದಲಾಗಿ ಎಷ್ಟೆಲ್ಲ ಜಿಲ್ಲೆಗಳ ಮೇಲೆ ವಿಜಯ ಸಾಧಿಸಲಾಗಿತ್ತೋ ಅಲ್ಲೆಲ್ಲ ಹೀಗೆ ಪತ್ರ ಬರೆದು ತಿಳಿಸಿದರು. ಎಂದರೆ, ಎಷ್ಟು ಹಣವನ್ನು ವಸೂಲು ಮಾಡಲಾಗಿತ್ತೋ ಅದನ್ನು ಮರಳಿ ಕೊಡಬೇಕು ಎಂದು ಹೇಳಿದರು. ಇದರ ಕುರಿತು ಮೊದಲು ಹಝ್ರತ್ ಉಮರ್‌ರೊಡನೆ ಕೇಳಲಾಗಿತ್ತು ಎಂಬುದಾಗಿಯೂ ವರದಿಗಳು ಇವೆ. ನಿಮಗೆ ಸಂರಕ್ಷಿಸಲು ಸಾಧ್ಯವಿಲ್ಲವೆಂದಾದರೆ ಅವರಿಂದ ಪಡೆಯಲಾದ ಜಿಝ್ಯಿಯ ಇತ್ಯಾದಿಗಳನ್ನು ಮರಳಿ ಕೊಡಬೇಕೆಂದು ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರೇ ಹೇಳಿದ್ದರು.

ಎಲ್ಲ ಸ್ಥಿತಿಗತಿಗಳ ಬಗ್ಗೆ ಹಝ್ರತ್ ಅಬೂಉಬೈದ(ರ) ಹಝ್ರತ್ ಉಮರ್(ರ)ರಿಗೆ ಬರೆದು ತಿಳಿಸಿದರು. ರೋಮನರಿಗೆ ಹೆದರಿ ಮುಸ್ಲಿಮರು ಹಮಸಿಗೆ ಹೋಗಿರುವರು ಎಂದು ಹಝ್ರತ್ ಉಮರ್(ರ) ತಿಳಿದಾಗ ಅವರು ಬಹಳ ದುಃಖಿತರಾದರು. ಸಹಾಯಕ್ಕಾಗಿ ಸಈದ್ ಬಿನ್ ಆಮಿರ್‌ರನ್ನು ಕಳುಹಿಸುತ್ತೇನೆ ಎಂದು ಹಝ್ರತ್ ಉಮರ್(ರ) ಬರೆದು ತಿಳಿಸಿದರು. ಅಬೂಉಬೈದ(ರ) ಡಮಸ್ಕಸ್ ತಲುಪಿದ ಕೂಡಲೇ ಜೋರ್ದನಿನ ಜಿಲ್ಲೆಗಳಲ್ಲಿ ಜನರು ದಂಗೆಯೆದ್ದಿರುವ ಸುದ್ದಿ ಅಮ್ರ್ ಬಿನ್ ಆಸ್‌ನ ಕಡೆಯಿಂದ ಲಭಿಸಿತ್ತು. ಹೀಗೆ ಎರಡನೇ ದಿನ ಅಬೂಉಬೈದ ಜೋರ್ದನಿನ ಗಡಿ ಮಾರ್ಗದಲ್ಲಿ ಯರ್ಮೂಕಿಗೆ ತಲುಪಿದರು. ಇಲ್ಲಿಯ ಹಿಂದಿನ ಭಾಗದಿಂದ ಅರೇಬಿಯದ ಗಡಿಪ್ರದೇಶ ಸಮೀಪವಾಗಿತ್ತು. ತೆರೆದ ಮೈದಾನವಾಗಿರುವ ಕಾರಣದಿಂದ ಯುದ್ಧದ ಆವಶ್ಯಾನುಸಾರ ಹಿಂದಕ್ಕೆ ಸರಿಯುವುದು ಸಹ ಸುಲಭವಾಗಿತ್ತು. ರೋಮನರ ಯುದ್ಧ ತಯಾರಿಯ ಬಗ್ಗೆ ತಿಳಿದಾಗ ಮುಸ್ಲಿಮರು ಹೆದರಿದರು. ಹೀಗಾದಾಗ ಹಝ್ರತ್ ಉಮರ್(ರ)ರಿಗೆ ಹಝ್ರತ್ ಅಬೂಉಬೈದ(ರ) ಪುನಃ ಪತ್ರ ಬರೆದರು. ಹಝ್ರತ್ ಉಮರ್(ರ) ಎಲ್ಲ ಮುಹಾಜಿರ್ ಮತ್ತು ಅನ್ಸಾರರನ್ನು ಒಟ್ಟುಸೇರಿಸಿ ಆ ಪತ್ರವನ್ನು ಓದಿ ಕೇಳಿಸಿದರು. ಆಗ ಎಲ್ಲ ಸಹಾಬರು ಅತ್ತುಬಿಟ್ಟರು ಮತ್ತು ಹೀಗೆ ಹೇಳಿದರು: ಅಮೀರಲ್ ಮೂಅ್‌ಮಿನೀನ್, ನಮಗೆ ಅನುಮತಿ ಕೊಡಿರಿ. ನಾವು ನಮ್ಮ ಸಹೋದರರಿಗಾಗಿ ಹೋರಾಡಿ ಜೀವತ್ಯಾಗ ಮಾಡುವೆವು. ಹಝ್ರತ್ ಉಮರ್(ರ) ಸ್ವತಃ ಸೇನಾಧಿಪತಿಯಾಗಲು ಮತ್ತು ಸಹಾಬರೊಂದಿಗೆ ಹೊರಡಲು ಅಬ್ದುರ್ರಹ್ಮಾನ್ ಬಿನ್ ಔಫ್(ರ) ಸಲಹೆ ಕೊಟ್ಟರು. ಆದರೆ ಸಹಾಬರಲ್ಲಿ ಈ ಅಭಿಪ್ರಾಯದ ಬಗ್ಗೆ ಭಿನ್ನಾಭಿಪ್ರಾಯವುಂಟಾಯಿತು. ಕೊನೆಗೆ ಇನ್ನಷ್ಟು ಸಹಾಯಕ ಸೈನ್ಯವನ್ನು ಕಳುಹಿಸಲು ತೀರ್ಮಾನಿಸಲಾಯಿತು. ಅಷ್ಟರಲ್ಲಿ ಶತ್ರುಗಳು ಯರ್ಮೂಕಿನಿಂದ ಮೂರ್‍ನಾಲ್ಕು ತಂಗುದಾಣಗಳ ದೂರದಲ್ಲಿದ್ದರು. ಸಹಾಯ ತಲುಪಿಸುವುದು ಅಸಾಧ್ಯವಾಗಿತ್ತು. ಹಝ್ರತ್ ಉಮರ್(ರ) ಅತ್ಯಂತ ಪ್ರಭಾವಶಾಲಿ ವಾಕ್ಯಗಳೊಂದಿಗೆ ಒಂದು ಪತ್ರವನ್ನು ಬರೆದರು ಮತ್ತು ದೂತನೊಡನೆ ಹೀಗೆ ಹೇಳಿದರು: ನೀನು ಸ್ವತಃ ಸೈನ್ಯದ ಪ್ರತಿಯೊಂದು ಪಂಕ್ತಿಗೆ ಹೋಗಿ ಈ ಪತ್ರವನ್ನು ಓದಿ ಹೇಳಬೇಕು. ಅವರೊಡನೆ ಹೀಗೆಯೂ ಹೇಳಬೇಕು: ಉಮರ್ ನಿಮಗೆ ಸಲಾಂ ಹೇಳುತ್ತಾರೆ, ಎಲೈ ಮುಸ್ಲಿಮರೇ, ಧೈರ್ಯದಿಂದ ಹೋರಾಡಿರಿ, ತಮ್ಮ ಶತ್ರುಗಳ ಮೇಲೆ ಸಿಂಹಗಳ ಹಾಗೆ ಎರಗಿರಿ, ಖಡ್ಗಗಳಿಂದ ಅವರ ತಲೆಗಳನ್ನು ಕಡಿಯಿರಿ. ಅವರು ನಿಮ್ಮ ಮುಂದೆ ಇರುವೆಗಳಿಗಿಂತ ಕೀಳಾಗಬೇಕು. ಅವರ ಸೈನ್ಯದ ಆಧಿಕ್ಯ ನಿಮ್ಮನ್ನು ಭಯಗೊಳಿಸದಿರಲಿ, ನಿಮ್ಮೊಂದಿಗೆ ಇನ್ನೂ ಬಂದು ಸೇರದ ಸಹಾಯಕ ಸೈನ್ಯದ ಬಗ್ಗೆ ಯೋಚಿಸಿ ಚಿಂತಿಸಬೇಡಿರಿ.

ಕಾಕತಾಳಿಯವೆಂಬಂತೆ, ದೂತನು ಅಬೂಉಬೈದರ ಬಳಿಗೆ ತಲುಪಿದ ಅದೇ ದಿನ ಸಈದ್ ಬಿನ್ ಆಮಿರ್ ಸಹ ಸಾವಿರ ಸೈನಿಕರೊಂದಿಗೆ ಅಲ್ಲಿಗೆ ತಲುಪಿದರು. ಇದರಿಂದ ಮುಸ್ಲಿಮರಿಗೆ ಬಹಳ ಶಕ್ತಿ ಲಭಿಸಿತು. ಎರಡು ಪಕ್ಷಗಳ ಸೈನಿಕರು ಪಂಕ್ತಿಬದ್ಧರಾದರು. ರೋಮನರ ಬಳಿ ಎರಡು ಲಕ್ಷಕ್ಕಿಂತ ಹೆಚ್ಚಿನ ಸೈನಿಕರಿದ್ದರು. 24 ಪಂಕ್ತಿಗಳಿದ್ದುವು. ಅವುಗಳ ಮುಂದೆ ಮುಂದೆಯಾಗಿ ಅವರ ಧಾರ್ಮಿಕ ಮುಖಂಡರು ಶಿಲುಬೆಗಳನ್ನು ಹಿಡಿದುಕೊಂಡು ಸೈನಿಕರಿಗೆ ಆವೇಶ ತುಂಬಿಸುತ್ತಿದ್ದರು. ಆರಂಭಿಕ ಹೋರಾಟದ ನಂತರ ಮೊದಲ ದಿನ ರೋಮನರು ಪರಾಜಯಗೊಂಡರು.

ಮುಂದಿನ ದಿನ ರೋಮನರು ಮುಸ್ಲಿಮರಿಗೆ ಸಂಪತ್ತು ಮತ್ತು ಚಿನ್ನಬಂಗಾರದ ಲಾಲಸೆ ಉಂಟುಮಾಡಲು ತನ್ನ ದೂತನನ್ನು ಕಳುಹಿಸಿ ಸಂಧಾನದ ಮಾತುಕತೆ ನಡೆಸಲು ಬಯಸಿದರು. ದೂತನು ತಲುಪಿದ ಸಮಯದಲ್ಲಿ ಮುಸ್ಲಿಮರು ಮಗ್‌ರಿಬ್ ನಮಾಝ್ ನಿರ್ವಹಿಸುತ್ತಿದ್ದರು. ಮುಸ್ಲಿಮರ ಮಗ್ನತೆ, ಮರ್ಯಾದೆ, ಸಭ್ಯತೆ ಮತ್ತು ವಿನಯವಂತಿಕೆಯನ್ನು ದೂತನು ಬಹಳ ಆಶ್ಚರ್ಯದಿಂದ ನೋಡುತ್ತಿದ್ದನು. ನಮಾಝಿನ ನಂತರ ದೂತನು ಹಝ್ರತ್ ಅಬೂಉಬೈದರೊಡನೆ ಕೆಲವು ಸವಾಲುಗಳನ್ನು ಕೇಳಿದನು. ಉದಾಹರಣೆಗೆ, ಈಸಾ ಮಸೀಹರ ಕುರಿತು ನಿಮ್ಮ ವಿಶ್ವಾಸವೇನೆಂದು ಕೇಳಿದನು. ಅದಕ್ಕೆ ಉತ್ತರವಾಗಿ ಅವರು ಸೂರಃ ಆಲಿ ಇಮ್ರಾನಿನ 60ನೇ ವಚನ ಮತ್ತು ಸೂರಃ ನಿಸಾದ 172 ಮತ್ತು 173ನೇ ವಚನಗಳನ್ನು ಪಾರಾಯಣ ಮಾಡಿದರು. ಅದರಲ್ಲಿ ಅಲ್ಲಾಹನು ಹಝ್ರತ್ ಈಸಾ ಮಸೀಹರ ಜನನವನ್ನು ಹಝ್ರತ್ ಆದಮರ ಜನನದೊಂದಿಗೆ ಹೋಲಿಸಿ ಹೇಳಿದ್ದಾನೆ ಮತ್ತು ಧರ್ಮದ ವಿಷಯದಲ್ಲಿ ಅತಿರೇಕದಿಂದ ವರ್ತಿಸದಿರಿ ಎಂದು ಅಹ್ಲೇಕಿತಾಬಿನವರೊಡನೆ ಉಪದೇಶಿಸಿದ್ದಾನೆ. ತನ್ನನ್ನು ಸ್ವತಃ ಅಲ್ಲಾಹನ ದಾಸನೆಂದು ಕರೆಯಲ್ಪಡುವುದನ್ನು ಈಸಾ ಮಸೀಹರು ಕೆಟ್ಟದಾಗಿ ಭಾವಿಸಲಾರರು ಎಂದೂ ಹೇಳಿದ್ದಾನೆ. ಈ ವಚನಗಳನ್ನು ಆಲಿಸಿ ದೂತನು ಹೀಗೆ ಹೇಳಿದನು: ಈಸಾ ಮಸೀಹರ ಗುಣಗಳು ಇವೇ ಆಗಿವೆ ಮತ್ತು ನಿಮ್ಮ ರಸೂಲ್ ಖಂಡಿತವಾಗಿಯೂ ಸತ್ಯವಂತರಾಗಿರುವರು. ಹೀಗೆ ಹೇಳುತ್ತಾ ದೂತನು ಮುಸ್ಲಿಮನಾದನು. ಮುಂದಿನ ದಿನ ಮುಸ್ಲಿಮರ ಕಡೆಯಿಂದ ಹಝ್ರತ್ ಖಾಲಿದ್(ರ) ಪ್ರತಿನಿಧಿಯಾಗಿ ಹೋದರು. ರೋಮನರು ಅವರ ವೈಭವಗಳಿಂದ ಹಝ್ರತ್ ಖಾಲಿದ್(ರ)ರನ್ನು ಪ್ರಭಾವಿತಗೊಳಿಸಲು ಬಯಸಿದರು. ಆದರೆ ಹಝ್ರತ್ ಖಾಲಿದ್(ರ) ಅವುಗಳಿಗೆ ಯಾವುದೇ ಬೆಲೆಕೊಡದೆ ಎಲ್ಲದರಿಂದ ಮುಖ ತಿರುಗಿಸಿದರು. ರೋಮನರ ಕಮಾಂಡರ್ ಬಾಹಾನನು ಹಣ ಮತ್ತು ಸಂಪತ್ತಿನ ಲಾಲಸೆಯನ್ನು ಹಝ್ರತ್ ಖಾಲಿದ್‌ರಿಗೆ ತೋರಿಸಿದನು. ಆದರೆ ಹಝ್ರತ್ ಖಾಲಿದ್(ರ) ಅದಕ್ಕೂ ಯಾವುದೇ ಬೆಲೆಕೊಡದೆ ನಿರಾಕರಿಸಿದರು.

ಈ ರಾಯಭಾರದ ನಂತರ ಕೊನೆಯ ಯುದ್ಧದ ತಯಾರಿಗಳು ಶುರುವಾದುವು. ಅದರ ನಂತರ ರೋಮನ್ನರು ಮತ್ತೆಂದಿಗೂ ಚೇತರಿಸಿಕೊಳ್ಳಲಿಲ್ಲ. ಮರುದಿನ ರೋಮನರು

ಆವೇಶ ಮತ್ತು ಸಾಧನಸಾಮಗ್ರಿಗಳೊಂದಿಗೆ ಹೋರಾಟಕ್ಕಾಗಿ ಹೊರಟರು. ಹಝ್ರತ್ ಖಾಲಿದ್(ರ) ಸಹ ಅರೇಬಿಯದ ಸಾಮಾನ್ಯ ರೀತಿಯನ್ನು ಬಿಟ್ಟುಕೊಂಡು ಹೊಸ ಶೈಲಿಯಲ್ಲಿ ಸೈನ್ಯವನ್ನು ತಯಾರಿ ಮಾಡಿದರು. ಮೂವತ್ತು ಮೂವತ್ತೈದು ಸಾವಿರ ಸೈನಿಕರಿದ್ದ ಸೇನೆಯನ್ನು 36 ಭಾಗಗಳನ್ನಾಗಿ ಮಾಡಿ ಅದನ್ನು ಅತ್ಯಂತ ನೈಪುಣ್ಯ ಮತ್ತು ಅತ್ಯುತ್ತಮ ರೀತಿಯಲ್ಲಿ ಪಂಕ್ತಿಬದ್ಧವಾಗಿ ನಿಲ್ಲಿಸಿದರು. ಭಾಷಣಗಾರರು ಸೈನ್ಯಕ್ಕೆ ಆವೇಶ ಮತ್ತು ಧೈರ್ಯವನ್ನು ತುಂಬಿಸಿ ಒಂದು ಹೊಸ ಲವಲವಿಕೆ ಮತ್ತು ಉತ್ಸಾಹ ಉಂಟುಮಾಡುತ್ತಿದ್ದರು. ಮುಸ್ಲಿಮರ ಸೈನ್ಯದಲ್ಲಿ ಪೂರ್ತಿ ಅರೇಬಿಯದ ಚುನಾಯಿತ ವ್ಯಕ್ತಿಗಳು ಭಾಗಿಗಳಾಗಿದ್ದರು. ಅದರಲ್ಲಿ ನೂರು ಬದರೀ ಸಹಾಬಿಯರು ಮತ್ತು ಹಝ್ರತ್ ಪೈಗಂಬರ್(ಸ)ರನ್ನು ಕಂಡಿದ್ದ ಒಂದು ಸಾವಿರದಷ್ಟು ಹಿರಿಯರು ಇದ್ದರು. ಮಹಿಳೆಯರು ಕೂಡ ಈ ಯುದ್ಧದಲ್ಲಿ ಭಾಗವಹಿಸಿದ್ದರು ಎಂಬುದು ಈ ಯುದ್ಧದ ಒಂದು ವೈಶಿಷ್ಟ್ಯವಾಗಿದೆ. ಅವರು ಬಹಳ ಧೈರ್ಯದಿಂದ ಹೋರಾಡಿದ್ದರು. ಅವರಲ್ಲಿ ಅಬೂಸುಫ್ಯಾನಿನ ಪತ್ನಿಯಾದ ಹಿಂದ ಸಹ ಇದ್ದರು. ಅವರು ಬಹಳ ಧೈರ್ಯದಿಂದ ಹೋರಾಡಿದರು.

ರೋಮನರ ಆವೇಶದ ಸ್ಥಿತಿ ಹೇಗಿತ್ತು ಎಂದರೆ, ಮೂವತ್ತು ಸಾವಿರ ಜನರು ಸ್ಥಿರತೆಯಿಂದ ನಿಲ್ಲಲಿಕ್ಕಾಗಿ ಪಾದಗಳಲ್ಲಿ ಸಂಕೋಲೆಗಳನ್ನು ಹಾಕಿದ್ದರು. ಸಾವಿರಾರು ಪಾದರಿಗಳು ಮತ್ತು ಬಿಷಪರು ಕೈಯಲ್ಲಿ ಶಿಲುಬೆಗಳನ್ನು ಹಿಡಿದು ಹಝ್ರತ್ ಈಸಾ ಮಸೀಹರಿಗೆ ಜೈಕಾರ ಹಾಕುತ್ತಿದ್ದರು. ಎರಡು ಲಕ್ಷಗಳ ಸೈನಿಕರ ಹಿಂಡು ಮುಂದಕ್ಕೆ ಧಾವಿಸಿತು. ಅತ್ಯಂತ ಶಕ್ತವಾದ ದಾಳಿ ನಡೆಸಿತು. ಮುಸ್ಲಿಮರು ಬಹಳ ದೀರ್ಘ ಸಮಯದ ವರೆಗೆ ಅಚಂಚಲರಾಗಿದ್ದರು. ಆದರೆ ಅನಂತರ ಮುಸ್ಲಿಮರ ಬಲಗಡೆಯ ಸೈನ್ಯಭಾಗದ ಪಂಕ್ತಿ ಮುರಿದುಹೋಯಿತು. ಮುಸ್ಲಿಂ ಸಿಪಾಯಿಗಳು ಹಿಂದಕ್ಕೆ ಸರಿಯುವುದನ್ನು ನೋಡಿದ ಮಹಿಳೆಯರು ಅವರಿಗೆ ಧೈರ್ಯ ನೀಡಿದರು. ಯುದ್ಧದ ತೀವ್ರತೆ ಎಷ್ಟಿತ್ತೆಂದರೆ ಎಲ್ಲ ಕಡೆಯಿಂದಲೂ ಕೈಕಾಲುಗಳು ಮುರಿದು ಬೀಳುತ್ತಾ ಹೋಗುತ್ತಿತ್ತು. ಆದರೆ ಸಿಪಾಯಿಗಳ ಸ್ಥಿರತೆಯಲ್ಲಿ ಯಾವುದೇ ಕೊರತೆ ಉಂಟಾಗುತ್ತಿರಲಿಲ್ಲ. ಅಚಾನಕ್ಕಾಗಿ ಹಝ್ರತ್ ಖಾಲಿದ್(ರ)ರ ಸೈನ್ಯ ಪಂಕ್ತಿಗಳನ್ನು ಮುರಿಯುತ್ತಾ ಮುಂದಕ್ಕೆ ಸಾಗಿದರು. ಅವರು ಎಷ್ಟು ಶಕ್ತವಾಗಿ ಆಕ್ರಮಣ ನಡೆಸಿದರು ಎಂದರೆ, ಅದು ರೋಮನರ ಪಂಕ್ತಿಗಳನ್ನು ತಲೆಕೆಳಗಾಗಿ ಮಾಡಿತು. ಅವರನ್ನು ಅದುಮುತ್ತಾ ಸೇನಾಧಿಪತಿ ದರಿಂಜಾರ್ ತನಕ ತಲುಪಿದರು. ಇಕ್ರಿಮ ಬಿನ್ ಅಬೂಜಹಲ್ ಕ್ರೈಸ್ತರಿಗೆ ಪಂಥಾಹ್ವಾನ ನೀಡುತ್ತಾ ಸಾಯಲು ಸಿದ್ಧರೆಂದು ಪ್ರತಿಜ್ಞೆ ಮಾಡಿದ್ದ ನಾನ್ನೂರು ವ್ಯಕ್ತಿಗಳೊಂದಿಗೆ ಮುಂದಕ್ಕೆ ಧಾವಿಸಿದರು. ಅವರಲ್ಲಿ ಬಹುತೇಕ ಎಲ್ಲರೂ ಶಹೀದಾದರು. ಆದರೆ ಶತ್ರುಗಳ ಸಾವಿರಾರು ಜನರನ್ನು ಅವರು ಕೊಂದುಹಾಕಿದರು. ಅದೇ ವೇಳೆ ರೋಮ್ ಸೈನ್ಯದ ಸರದಾರ ಇಬ್ನು ಖನಾತೀರ್ ಮುಸ್ಲಿಮರ ಎಡಭಾಗದ ಸೈನ್ಯದ ಮೇಲೆ ದಾಳಿ ನಡೆಸಿದನು. ಎಡಭಾಗದ ಬಹುತೇಕ ಸಿಪಾಯಿಗಳು ಲಹಮ್ ಮತ್ತು ಗ಼ಸಾನ್ ಗೋತ್ರದವರಾಗಿದ್ದರು. ಅವರು ದೀರ್ಘಕಾಲದಿಂದ ರೋಮನರಿಗೆ ಕಪ್ಪಕೊಡುವವರಾಗಿದ್ದರು ಮತ್ತು ಸಹಜವಾಗಿಯೇ ರೊಮನರಿಗೆ ಹೆದರುತ್ತಿದ್ದರು. ಅವರಿಗೆ ಈ ಆಕ್ರಮಣವನ್ನು ಸಹಿಸಲು ಸಾಧ್ಯವಾಗಲಿಲ್ಲ. ಅವರು ಹಿಂದಕ್ಕೆ ಸರಿದರು. ಹಿಂದೆಯಿದ್ದ ಮುಸ್ಲಿಂ ಮಹಿಳೆಯರು ಮುಂದಕ್ಕೆ ಹೋಗಿ ಬಹಳ ಧೈರ್ಯದಿಂದ ಕ್ರೈಸ್ತರನ್ನು ಮುಂದೆ ಬರುವುದರಿಂದ ತಡೆದರು. ಮುಸ್ಲಿಂ ಸೈನ್ಯದ ಸ್ಥಿತಿಗತಿ ಹೀನಾಯವಾಗುತ್ತಿತ್ತು. ಆದರೆ ಅಧಿಕಾರಿಗಳ ಧೈರ್ಯ ನೋಡಬೇಕಾದದ್ದೇ ಆಗಿತ್ತು. ಯುದ್ಧದಲ್ಲಿ ಅಷ್ಟರವರೆಗೆ ರೋಮನರು ಮೇಲುಗೈ ಸಾಧಿಸಿದ್ದರು. ಸೈನ್ಯದ ಎಡಭಾಗದ ಹಿಂದೆ ನಿಶ್ಚಯಗೊಂಡಿದ್ದ ಖೈಸ್ ಬಿನ್ ಹಬೀರ ಅಚಾನಕ್ಕಾಗಿ ಹಿಂದಿನಿಂದ ದಾಳಿ ನಡೆಸಿದರು. ಈ ದಾಳಿ ಎಷ್ಟು ತೀವ್ರವಾಗಿತ್ತು ಎಂದರೆ ರೋಮನರಿಗೆ ಅದನ್ನು ನಿಯಂತ್ರಿಸಲು ಸಾಧ್ಯವಾಗಲಿಲ್ಲ. ಅವರ ಎಲ್ಲ ಪಂಕ್ತಿಗಳು ಚದುರಿ ಹೋದುವು. ಅದರೊಂದಿಗೆ ಸಈದ್ ಬಿನ್ ಝೈದ್ ಮಧ್ಯ ಭಾಗದಿಂದ ಹೊರಟು ಆಕ್ರಮಣ ನಡೆಸಿದರು. ರೋಮನರು ಹಿಂದೆ ಸರಿಯುತ್ತಾ ಮೈದಾನದ ಬದಿಯಲ್ಲಿದ್ದ ನಾಲೆಯ ತನಕ ತಲುಪಿದರು. ಸ್ವಲ್ಪ ಸಮಯದಲ್ಲಿ ಅವರ ಶವಶರೀರಗಳಿಂದ ಆ ನಾಲೆ ತುಂಬಿ ಹೋಯಿತು ಮತ್ತು ಮೈದಾನ ಖಾಲಿಯಾಯಿತು. ಒಟ್ಟಿನಲ್ಲಿ ಅಲ್ಲಾಹನು ಈ ಅತಿ ಪ್ರಧಾನವಾದ ಯುದ್ಧದಲ್ಲಿ ಮುಸ್ಲಿಮರಿಗೆ ಮಹತ್ತಾದ ವಿಜಯವನ್ನು ನೀಡಿದನು. ಈ ಯುದ್ಧದ ಒಂದು ಘಟನೆಯು ನೆನಪಿಡಲು ಯೋಗ್ಯವಾದುದಾಗಿದೆ. ಅದೇನೆಂದರೆ, ಘೋರವಾದ ಯುದ್ಧ ನಡೆಯುತ್ತಿದ್ದಾಗ ಒಬ್ಬ ಮುಸ್ಲಿಂ ಸಿಪಾಯಿಯಾದ ಹಬ್ಬಾಸ್ ಬಿನ್ ಖೈಸ್ ಎಂಬವರು ಜೀವದ ಹಂಗು ತೊರೆದು ಹೇಗೆ ಹೋರಾಡಿದರು ಎಂದರೆ, ಅವರ ಒಂದು ಕಾಲು ಮುರಿದು ಹೋಯಿತು ಆದರೆ ಅದು ಅವರಿಗೆ ಗೊತ್ತೇ ಆಗಲಿಲ್ಲ.

ಈ ಯುದ್ಧದಲ್ಲಿ ರೋಮನರ ಎಪ್ಪತ್ತು ಸಾವಿರ ಅಥವಾ ಒಂದು ಲಕ್ಷದಷ್ಟು ಸಿಪಾಯಿಗಳು ಕೊಲ್ಲಲ್ಪಟ್ಟರು. ಮುಸ್ಲಿಮರ ಕಡೆಯಲ್ಲಿ ಮೂರು ಸಾವಿರದಷ್ಟು ಜನರ ಜೀವಹಾನಿಯುಂಟಾಯಿತು. ಅಂತಾಕಿಯದಲ್ಲಿ ಸೋಲಿನ ಸುದ್ದಿ ಲಭಿಸಿದ ಕೂಡಲೇ ಸೀಸರ್ ಇಸ್ತಂಬೂಲ್‌ಗೆ ರವಾನೆಯಾದನು. ವಿಜಯದ ಸುವಾರ್ತೆ ಲಭಿಸಿದ ಕೂಡಲೇ ಹಝ್ರತ್ ಉಮರ್(ರ) ಸಾಷ್ಟಾಂಗವೆರಗಿದರು ಮತ್ತು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಿದರು. ಹಝ್ರತ್ ಮುಸ್ಲಿಹ್ ಮೌಊದ್(ರ) ಸಹ ಈ ಯುದ್ಧದ ಬಗ್ಗೆ ವಿವರಿಸಿದ್ದಾರೆ. ಅವರಿಗೆ ಚರಿತ್ರೆಯ ಬಗ್ಗೆ ಆಳವಾದ ಜ್ಞಾನವಿತ್ತು. ಹಝ್ರತ್ ಉಮರ್(ರ)ರೊಡನೆ ಕೇಳಿಯೇ ಹಝ್ರತ್ ಅಬೂಉಬೈದ(ರ) ಟಾಕ್ಸ್ ಇತ್ಯಾದಿಗಳನ್ನು ಕ್ರೈಸ್ತರ ನಾಗರಿಕರಿಗೆ ಮರಳಿಸಿದ್ದರು ಎಂದಾಗಿತ್ತು ಹಝ್ರತ್ ಮುಸ್ಲಿಹ್ ಮೌಊದ್(ರ)ರ ಅನಿಸಿಕೆ.

ಹಝ್ರತ್ ಇಕ್ರಿಮ(ರ) ಮತ್ತು ಅವರ ಹನ್ನೆರಡು ಸಂಗಡಿಗರ ತ್ಯಾಗದ ಘಟನೆಯನ್ನು ವಿವರಿಸುತ್ತಾ ಹಝ್ರತ್

ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಯುದ್ಧದ ನಂತರ ನೀರು ಕುಡಿಸುವ ವ್ಯಕ್ತಿ ಅವರ ಬಳಿಗೆ ತಲುಪಿದಾಗ ಹಝ್ರತ್ ಇಕ್ರಿಮ ಮುಂದಿನ ಗಾಯಾಳು ವ್ಯಕ್ತಿಯ ಕಡೆಗೆ ಬೊಟ್ಟು ಮಾಡುತ್ತಾ ಹೀಗೆ ಹೇಳಿದರು: ಮೊದಲು ಅವರಿಗೆ ನೀರು ಕುಡಿಸಿರಿ, ಅವರಿಗೆ ನನಗಿಂತ ಹೆಚ್ಚು ನೀರಿನ ಆವಶ್ಯಕತೆಯಿದೆ. ನೀರು ಕುಡಿಸುವ ವ್ಯಕ್ತಿಯು ಮುಂದಿನ ಗಾಯಾಳುವಿನ ಬಳಿಗೆ ಹೋದಾಗ, ಅವರು ಮತ್ತೊಬ್ಬ ಗಾಯಾಳುವಿನ ಕಡೆಗೆ ಬೊಟ್ಟು ಮಾಡುತ್ತಾ, ಅವರಿಗೆ ನೀರಿನ ಆವಶ್ಯಕತೆ ನನಗಿಂತ ಹೆಚ್ಚಿದೆ, ಅವರಿಗೆ ಕುಡಿಸಿರಿ ಎಂದು ಹೇಳಿದರು. ಹೀಗೆ ನೀರು ಕುಡಿಸುವವನು ಯಾವ ಸಿಪಾಯಿಯ ಬಳಿಗೆ ಹೋದರೂ ಅವರು ಬೇರೆಯವರ ಕಡೆಗೆ ಅವನನ್ನು ಕಳುಹಿಸುತ್ತಿದ್ದರು ಮತ್ತು ಯಾರೂ ನೀರು ಕುಡಿಯುತ್ತಿರಲಿಲ್ಲ. ನೀರು ಕುಡಿಸುವ ವ್ಯಕ್ತಿ ಕೊನೆಯ ಗಾಯಾಳು ವ್ಯಕ್ತಿಯ ಬಳಿಗೆ ತಲುಪಿದಾಗ ಅವರು ಮೃತಪಟ್ಟಿದ್ದರು. ಅವರು ಇಕ್ರಿಮರ ಬಳಿಗೆ ಮರಳಿ ಬಂದಾಗ ಅವರು ಕೂಡ ಮೃತಪಟ್ಟಿದ್ದರು. ಇತರ ಗಾಯಾಳುಗಳ ಅವಸ್ಥೆ ಕೂಡ ಇದೇ ಆಗಿತ್ತು. ನೀರು ಕುಡಿಸುವವನು ಮರಳಿ ತಲುಪುವಷ್ಟರಲ್ಲಿ ಅವರೆಲ್ಲರೂ ಮೃತಪಟ್ಟಿದ್ದರು.

(ಇನ್‌ಶಾ ಅಲ್ಲಾಹ್ ಈ ಪ್ರಸ್ತಾಪ ಮುಂದುವರೆಯುವುದು ಎಂದು ಖುತ್ಬದ ಕೊನೆಯಲ್ಲಿ ಹಝ್ರತ್ ಖಲೀಫತುಲ್ ಮಸೀಹರು ಹೇಳಿದರು.)

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِىَ لَهٗ ؕ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis**(atba)*

*At, Masjid Mubarak, Islamabad, Tilford, UK, On 17-09-2021*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian



***Email***: *khutuba.kannada@gmail.com*



**You can find all the Sermons archived at**: www.alislam.org/friday-sermon